**File No.WCDSEC-SBB/185/2020-WCD-SEC D-WOMEN AND CHILD WELFARE SEC**

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: 2020-21ನೇ ಸಾಲಿನ ಆಯವ್ಯಯ ಘೋಷಣೆಯ ಕಂಡಿಕೆ 127 ರಲ್ಲಿ ಘೋಷಿಸಿರುವಂತೆ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯಡಿ ಮಕ್ಕಳ ಪಾಲನಾ ಸಂಸ್ಥೆಗಳಿಂದ ಬಿಡುಗಡೆಯಾದ 18 ವರ್ಷ ಮೀರಿದ ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಹಾಗೂ ಅವರು ಆರ್ಥಿಕವಾಗಿ ಸ್ವಾವಲಂಬನೆಗೊಳ್ಳುವವರೆಗೆ ಆರ್ಥಿಕ ನೆರವನ್ನು ನೀಡಲು ಉದ್ದೇಶಿಸಿದ "ಉಪಕಾರ" ಎಂಬ ಹೊಸ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ: ನಿರ್ದೇಶಕರು, ಸಮಗ್ರ ಮಕ್ಕಳ ರಕ್ಷಣಾ ಯೋಜನೆ, ಬೆಂಗಳೂರು, ಇವರ ಏಕ ಕಡತ ಪ್ರಸ್ತಾವನೆ ಸಂಖ್ಯೆ:ಕೆಎಸ್‌ಐಸಿಪಿಎಸ್/SARA-15/2020-21 ದಿನಾಂಕ:03.10.2020.

*****

**ಪ್ರಸ್ತಾವನೆ:**

2020-21ನೇ ಸಾಲಿನ ಸನ್ಮಾನ್ಯ ಮುಖ್ಯಮಂತ್ರಿಯವರು ಆಯವ್ಯಯ ಭಾಷಣದ ಕಂಡಿಕೆ 127ರಲ್ಲಿ ಬಾಲಮಂದಿರದಿಂದ 21 ವರ್ಷ ತುಂಬಿದ ನಂತರ ಬಿಡುಗಡೆ ಹೊಂದುವವರಿಗೆ ಉದ್ಯೋಗ ಪ್ರಾರಂಭಿಸಲು ಹಾಗೂ ಅವರ ಮುಂದಿನ ಜೀವನೋಪಾಯವನ್ನು ರೂಪಿಸಿಕೊಳ್ಳಲು ತಿಂಗಳಿಗೆ 5.000 ರೂ.ಗಳಂತೆ ಗರಿಷ್ಠ ಮೂರು ವರ್ಷದವರೆಗೆ ಆರ್ಥಿಕ ನೆರವು ನೀಡುವ "ಉಪಕಾರ" ಯೋಜನೆಯನ್ನು ಜಾರಿಗೆ ತರಲಾಗುವುದು. ಇಂತಹ ಯುವಕ/ಯುವತಿಯವರಿಗೆ ಕೌಶಲ್ಯಾಭಿವೃದ್ಧಿ ಇಲಾಖೆಯವತಿಯಿಂದ ಕೌಶಲ್ಯ ತರಬೇತಿ ನೀಡಿ ಅವರಿಗೆ ಉದ್ಯೋಗಾವಕಾಶ ಕಲ್ಪಿಸಿಕೊಡಲಾಗುವುದು. ಈ ಉದ್ದೇಶಕ್ಕಾಗಿ 2020-21ನೇ ಸಾಲಿನಲ್ಲಿ ಒಂದು ಕೋಟಿ ರೂ.ಗಳನ್ನು ಒದಗಿಸಲಾಗುವುದು ಎಂದು ಘೋಷಿಸಲಾಗಿದೆ.

ಮೇಲೆ ಓದಲಾದ ಏಕ ಕಡತ ಪ್ರಸ್ತಾವನೆಯಲ್ಲಿ ನಿರ್ದೇಶಕರು, ಸಮಗ್ರ ಮಕ್ಕಳ ರಕ್ಷಣಾ ಯೋಜನೆ ಬೆಂಗಳೂರು ಇವರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಬಾಲಮಂದಿರಗಳಲ್ಲಿರುವ ಹಾಗೂ ಬಾಲ ನ್ಯಾಯ ಮಕ್ಕಳ (ಪಾಲನೆ ಮತ್ತು ರಕ್ಷಣೆ) ಕಾಯ್ದೆ -2015 ರನ್ವಯ ನೋಂದಾಯಿತ ಎಲ್ಲಾ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿರುವ 18 ವರ್ಷ ಪೂರ್ಣಗೊಂಡ ಮಕ್ಕಳ ಮುಂದಿನ ಪುನರ್ವಸತಿಗಾಗಿ ಹಾಗೂ ಸಮಾಜದಲ್ಲಿ ಗೌರವಯುತವಾಗಿ ಮತ್ತು ಸ್ವತಂತ್ರವಾಗಿ ಜೀವನ ನಿರ್ವಹಿಸಲು ಅನುವಾಗುವಂತೆ ಹಾಗೂ ಅವರುಗಳು ಆರ್ಥಿಕ ಸ್ವಾವಲಂಬನೆಗೊಳ್ಳುವವರೆಗೆ ಅಥವಾ ಗರಿಷ್ಠ 3 ವರ್ಷಗಳ ಅವಧಿಗೆ ಇವೆರಡರಲ್ಲಿ ಯಾವುದ ಮೊದಲೋ ಅಲ್ಲಿಯವರೆಗೆ ಆರ್ಥಿಕ ನೆರವನ್ನು ನೀಡಲು ಆಯವ್ಯಯ ಭಾಷಣದಲ್ಲಿ ಘೋಷಿಸಲಾದ "ಉಪಕಾರ್" ಎಂಬ ಹೊಸ ಯೋಜನೆಯನ್ನು 2020-21ನೇ ಸಾಲಿನಲ್ಲಿ ಪ್ರಾರಂಭಿಸಲು ಹಾಗೂ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಅನುಷ್ಠಾನಗೊಳಿಸಲು ಕ್ರಿಯಾ ಯೋಜನೆಯೊಂದಿಗೆ ಪ್ರಸ್ತಾವನೆ ಸಲ್ಲಿಸಲಿರುತ್ತಾರೆ.

ಈ ಯೋಜನೆಯ ಅನುಸಾರ, ಪ್ರತಿ ಫಲಾನುಭವಿಗೆ ಮಾಹೆಯಾನ ರೂ.5,000/- ಗಳಂತೆ ಪ್ರತಿ ವರ್ಷಕ್ಕೆ ರೂ.60,000/- ಗಳಂತೆ, ಗರಿಷ್ಠ ಮೂರು ಅವಧಿಗೆ ಪ್ರತಿ ಫಲಾನುಭವಿಗೆ ರೂ. ರೂ.1,80,000/-ಗಳ ವೆಚ್ಚವಾಗುತ್ತದೆ. 2020-21 ನೇ ಸಾಲಿನಲ್ಲಿ 165 ಫಲಾನುಭವಿಗಳಿಗೆ ಯೋಜನೆಯ ಪ್ರಯೋಜನವನ್ನು ಒದಗಿಸಿಕೊಡಲು ಉದ್ದೇಶೀಸಲಾಗಿದ್ದು, ಪ್ರತಿ ಫಲಾನುಭವಿಗೆ ರೂ. 60,000.00 ದಂತೆ, ಒಟ್ಟು ರೂ. 99,00,000.00 ಹಾಗೂ ರೂ. 1,00,00,000 ಗಳ ಆಡಳಿತಾತ್ಮಕ ವೆಚ್ಚ ಸೇರಿ ಒಟ್ಟು ರೂ. 1,00,00,000/-(ಒಂದು ಕೋಟಿ ರೂಪಾಯಿಗಳು ಮಾತ್ರ) ಗಳ ವೆಚ್ಚವಾಗುತ್ತದೆ. ಸಮಗ್ರ ಮಕ್ಕಳ ರಕ್ಷಣಾ ಯೋಜನೆಗೆ ಲೆಕ್ಕ ಶೀರ್ಷಿಕೆ:2235-02-102-0-36 ಮಂಜೂರಾಗಿದ್ದು, ಉಪಕಾರ ಯೋಜನೆಯನ್ನು ಸದರಿ ಲೆಕ್ಕ ಶೀರ್ಷಿಕೆಯಡಿಯಲ್ಲಿಯೇ ಅನುಷ್ಠಾನಗೊಳಿಸಲು ರೂ.1,00,00,000/-(ಒಂದು ಕೋಟಿ ರೂಪಾಯಿಗಳು ಮಾತ್ರ) ಗಳನ್ನು ಬಿಡುಗಡೆಗೊಳಿಸಿದಲ್ಲಿ, 2020-21 ನೇ ಸಾಲಿನಲ್ಲಿ ಉಪಕಾರ್ ಯೋಜನೆಯನ್ನು ಅನುಷ್ಠಾನಗೊಳಿಸಬಹುದಾಗಿದೆ ಎಂದು ಪ್ರಸ್ತಾಪಿಸಿರುತ್ತಾರೆ.

17/11/20



Scanned with OKEN Scanner

ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಪರಿಶೀಲಿಸಲಾಯಿತು. ಆರ್ಥಿಕ ಇಲಾಖೆಯು, 2020-21ನೇ ಸಾಲಿನಲ್ಲಿ ಆಯವ್ಯಯ ಘೋಷಣೆಯ ಕಂಡಿಕೆ 127ಅನ್ನು ಭಾಗಶಃ ಮಾರ್ಪಡಿಸಿ, ಬಾಲಮಂದಿರದಿಂದ 21 ವರ್ಷ ತುಂಬಿದ ನಂತರ ಬಿಡುಗಡೆ ಹೊಂದುವವರ ಬದಲಾಗಿ, ಬಾಲ ನ್ಯಾಯ ಮಕ್ಕಳ (ಪಾಲನೆ ಮತ್ತು ರಕ್ಷಣೆ) ಕಾಯ್ದೆ-2015 ರನ್ವಯ ನೋಂದಾಯಿತ ಎಲ್ಲಾ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿರುವ 18 ವರ್ಷ ವಯಸ್ಸು ಪೂರ್ಣಗೊಂಡ ಬಿಡುಗಡೆ ಹೊಂದುವವರಿಗೆ ಉದ್ಯೋಗ ಪ್ರಾರಂಭಿಸಲು ಹಾಗೂ ಅವರ ಮುಂದಿನ ಜೀವನೋಪಾಯವನ್ನು ರೂಪಿಸಿಕೊಳ್ಳಲು ಈ ಹೊಸಾ ಯೋಜನೆಯನ್ನು ಪ್ರಾರಂಭಿಸಲು ಆಡಳಿತಾತ್ಮಕ ಅನುಮೋದನೆ ನೀಡಲು ಸಹಮತಿ ನೀಡಿರುತ್ತದೆ ಹಾಗೂ ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ:2235-02-102-0-36-103 ರಡಿ ಒದಗಿಸಲಾಗಿರುವ ರೂ.100.00 ಲಕ್ಷಗಳ ಅನುದಾನದಿಂದ ಭರಿಸುವಂತೆ ತಿಳಿಸಿರುತ್ತದೆ.

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಮಮಇ 185 ಮಭಾಬ 2020, ಬೆಂಗಳೂರು, ದಿನಾಂಕ: 17.11.2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, 2020-2021ನೇ ಸಾಲಿನ ಆಯವ್ಯಯ ಭಾಷಣದ ಘೋಷಣೆಯ ಕಂಡಿಕೆ-127 ಅನ್ನು ಭಾಗಶಃ ಮಾರ್ಪಡಿಸಿ, "ಬಾಲನ್ಯಾಯ ಮಕ್ಕಳ (ಪಾಲನೆ ಮತ್ತು ರಕ್ಷಣೆ) ಕಾಯ್ದೆ-2015 ರನ್ವಯ ನೋಂದಾಯಿತ ಎಲ್ಲಾ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿರುವ 18 ವರ್ಷ ಪೂರ್ಣಗೊಂಡ ಮಕ್ಕಳ ಮುಂದಿನ ಪುನರ್ವಸತಿಗಾಗಿ ಹಾಗೂ ಸಮಾಜದಲ್ಲಿ ಗೌರವಯುತವಾಗಿ ಮತ್ತು ಸ್ವತಂತ್ರವಾಗಿ ಜೀವನ ನಿರ್ವಹಿಸಲು ಅನುವಾಗುವಂತೆ ಹಾಗೂ ಅವರುಗಳು ಆರ್ಥಿಕ ಸ್ವಾವಲಂಬನೆಗೊಳ್ಳುವವರೆಗೆ ಅಥವಾ ಗರಿಷ್ಠ ಮೂರು ವರ್ಷಗಳ ಅವಧಿಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಪ್ರತಿ ಫಲಾನುಭವಿಗೆ ಮಾಹೆಯಾನ ರೂ.5,000/-ಗಳಂತೆ ಆರ್ಥಿಕ ನೆರವು ನೀಡಲು "ಉಪಕಾರ್" ಎಂಬ ಹೊಸ ಯೋಜನೆಗೆ, ಈ ಆದೇಶದ ಅನುಬಂಧದಲ್ಲಿರುವ ಮಾರ್ಗಸೂಚಿಯನ್ವಯ, ನಿಯಮಾನುಸಾರ ಮತ್ತು ಪಾರದರ್ಶಕತೆಯನ್ವಯ ಅನುಷ್ಠಾನಗೊಳಿಸುವ ಷರತ್ತಿಗೊಳಪಟ್ಟು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.

ಈ ಹೊಸ ಯೋಜನೆಗೆ ಸಂಬಂಧಿಸಿದ ವೆಚ್ಚವನ್ನು 2020-21ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ:2235-02-102-0-36-103ರಡಿ ಒದಗಿಸಿರುವ ರೂ.100.00ಲಕ್ಷಗಳ (ಒಂದು ನೂರು ಲಕ್ಷಗಳು) ಅನುದಾನದಲ್ಲಿ ಭರಿಸುವಂತೆ ತಿಳಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 314 ವೆಚ್ಚ-10/2020 ದಿನಾಂಕ:05.11.2020ರಲ್ಲಿ ನೀಡಿರುವ ಸಹಮತಿ ಹಾಗೂ ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ ಪಿಡಿಎಸ್ 35 ಐಎಂಎಂ 2020, ದಿನಾಂಕ:09.11.2020 ಮತ್ತು ನೀಡಲಾದ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ವಿ. ಭಾಗ್ಯಲಕ್ಷ್ಮಿ) 17/11
ಸರ್ಕಾರದ ಅಧೀನ ಕಾರ್ಯದರ್ಶಿ-3
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ

(ವಿ.ಭಾಗ್ಯಲಕ್ಷ್ಮಿ) 17/11/20
ಸರ್ಕಾರದ ಅಧೀನ ಕಾರ್ಯದರ್ಶಿ-3,
ಮಹಿಳಾ ಮತ್ತು ಮಕ್ಕಳ ಅಭಿವದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ(ಡಿ ಶಾಖೆ).

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಎ & ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು-560 001.



Scanned with OKEN Scanner

2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನಾ ಇಲಾಖೆ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕೌಶಲ್ಯಾಭಿವೃದ್ಧಿ ಇಲಾಖೆ,ಬೆಂಗಳೂರು.
7. ಆಯುಕ್ತರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
8. ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ, ಬೆಂಗಳೂರು.
9. ಯೋಜನಾ ನಿರ್ದೇಶಕರು, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ, ಬೆಂಗಳೂರು.
10. ನಿರ್ದೇಶಕರು/ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು,
11. ನಿರ್ದೇಶಕರು, ಪಿಎಂಐ, ವಿಭಾಗ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
12. ಆಂತರಿಕ ಆರ್ಥಿಕ ಸಲಹೆಗಾರರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
13. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರ ಆಪ್ತ ಕಾರ್ಯದರ್ಶಿ,ವಿಕಾಸ ಸೌಧ, ಬೆಂಗಳೂರು.
14. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-10), ವಿಧಾನ ಸೌಧ, ಬೆಂಗಳೂರು.
15. ಉಪನಿರ್ದೇಶಕರು, ಎನ್.ಎಂ.ಸಿ, ಖನಿಜ ಭವನ, ಬೆಂಗಳೂರು.
16. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ, ಬೆಂಗಳೂರು.
17. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

17/11/20

(ವಿ. ಭಾಗ್ಯಲಕ್ಷ್ಮಿ)
ಸರ್ಕಾರದ ಅಧೀನ ಕಾರ್ಯದರ್ಶಿ-3
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ

Scanned with OKEN Scanner

File No.WCDSEC-SBB/185/2020-WCD-SEC D-WOMEN AND CHILD WELFARE SEC

ಸರ್ಕಾರಿ ಆದೇಶ ಸಂಖ್ಯೆ: ಮಮಇ 185 ಮಭಾಬ 2020, ಬೆಂಗಳೂರು, ದಿನಾಂಕ: 17.11.2020ಕ್ಕೆ ಅನುಬಂಧ

2020-21ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿದಂತೆ ಬಾಲನ್ಯಾಯ ಮಕ್ಕಳ (ಪಾಲನೆ ಮತ್ತು ರಕ್ಷಣೆ) ಕಾಯ್ದೆ-2015ರಡಿ, ಎಲ್ಲಾ ನೋಂದಾಯಿತ ಮಕ್ಕಳ ಪಾಲನಾ ಸಂಸ್ಥೆಗಳಿಂದ ಬಿಡುಗಡೆಯಾದ 18 ವರ್ಷ ವಯಸ್ಸನ್ನು ಮೀರಿದ ಅರ್ಹ ಮಕ್ಕಳಿಗೆ ಅವರು ಆರ್ಥಿಕವಾಗಿ ಸ್ವಾವಲಂಬಿಗಳಾಗುವವರೆಗೆ ಅಥವಾ ಗರಿಷ್ಠ 3 ವರ್ಷಗಳ ಅವಧಿಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಪುನರ್ವಸತಿಗಾಗಿ ಆರ್ಥಿಕ ಸೌಲಭ್ಯ ಒದಗಿಸುವ "ಉಪಕಾರ" ಯೋಜನೆಯ ಅನುಷ್ಠಾನದ ಮಾರ್ಗಸೂಚಿಗಳು

ಯೋಜನೆಯ ಉದ್ದೇಶಗಳು:

ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ, 2015ರ ಸೆಕ್ಷನ್ 46 ರಲ್ಲಿ ಕೆಳಗಿನಂತೆ ವಿವರಿಸಲಾಗಿದೆ:

"ಮಕ್ಕಳ ಪಾಲನಾ ಸಂಸ್ಥೆಯಲ್ಲಿರುವ ಮಕ್ಕಳ ಅನುಪಾಲನೆ – ಹದಿನೆಂಟು ವರ್ಷಗಳ ವಯಸ್ಸು ತುಂಬಿದ ಮೇಲೆ, ಮಕ್ಕಳ ಪಾಲನಾ ಸಂಸ್ಥೆಯಲ್ಲಿರುವ ಯಾವುದೇ ಮಗುವಿಗೆ, ನಿಯಮಿಸಬಹುದಾದ ರೀತಿಯಲ್ಲಿ, ಮಗುವನ್ನು ಸಮಾಜದ ಮುಖ್ಯವಾಹಿನಿಗೆ ತಂದು ಮತ್ತೆ ಸಮಾಜದಲ್ಲಿ ಸಮ್ಮಿಳಿತ ಮಾಡಲು ಆರ್ಥಿಕ ನೆರವನ್ನು ಒದಗಿಸಬಹುದು."

ಬಾಲನ್ಯಾಯ ಮಕ್ಕಳ (ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮಗಳು-2016ರ ನಿಯಮ 25 (1)ನ್ನು ಈ ಕೆಳಗೆ ಉಲ್ಲೇಖಿಸಲಾಗಿದೆ:

**After Care of Children Leaving Institutional Care:-** (1) The State Government shall prepare a programme for children who have to leave Child Care Institutions on attaining eighteen years of age by providing for their education, giving them employable skills and placement as well as providing them places for stay to facilitate their re-integration into the mainstream of society.

ಮಕ್ಕಳ ಪಾಲನಾ ಸಂಸ್ಥೆಗಳಲ್ಲಿರುವ ಪ್ರತಿಯೊಂದು ಮಗುವಿಗೆ ಸಂಬಂಧಪಟ್ಟಂತೆ ಸಂಗ್ರಹಿಸುವ ಸಮಾಜಿಕ ತನಿಖಾ ವರದಿಯಲ್ಲಿನ ಮಾಹಿತಿಗಳ ಆಧಾರದ ಮೇಲೆ ಮಗುವಿನ ಸರ್ವತೋಮುಖ ಬೆಳವಣಿಗೆಗೆ ಹಾಗೂ ಭವಿಷ್ಯದ ಹಿತದೃಷ್ಟಿಯಿಂದ ಸೌಲಭ್ಯಗಳನ್ನು ಒದಗಿಸಲು ಸಿದ್ಧಪಡಿಸುವ ಯೋಜನೆಯೇ "ವೈಯಕ್ತಿಕ ಪಾಲನಾ ಯೋಜನೆ" (Individual Care Plan)ಯಾಗಿದೆ.

ಬಾಲನ್ಯಾಯ ಮಕ್ಕಳ (ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮಗಳು-2016ರ ನಿಯಮ 11(3), 13(7)(vi), 13(8)(ii), 19(4), 19(17), 62(6)(vii), 62(6)(x) ಮತ್ತು 69-(3)ರ ಅಂಶಗಳಲ್ಲಿ ವಿವರಿಸಿರುವಂತೆ ಮಕ್ಕಳ "ವೈಯಕ್ತಿಕ ಪಾಲನಾ ಯೋಜನೆ"ಯನ್ನು ಕಡ್ಡಾಯವಾಗಿ ಸಿದ್ಧಪಡಿಸುವುದು. ಈ ವೈಯಕ್ತಿಕ ಪಾಲನಾ ಯೋಜನೆಯು ಮಗುವಿನ ಉತ್ತಮ ಭವಿಷ್ಯ ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ.

ಪಾಲನಾ ಸಂಸ್ಥೆಯಲ್ಲಿರುವ ಮಕ್ಕಳು ಕೌಮಾರಾವಸ್ಥೆಗೆ ಪ್ರವೇಶಿಸಿದಾಗ ಅವರುಗಳಿಗೆ ಮುಂದಿನ ಭವಿಷ್ಯದ ಸುಂದರ ಕಲ್ಪನೆಯ ಬಗ್ಗೆ ಸೂಕ್ತ ರೀತಿಯಲ್ಲಿ ಮನವರಿಕೆ ಮಾಡಿಕೊಟ್ಟು ಸತ್ಪ್ರಜೆಗಳಾಗಲು ಮತ್ತು 18 ವರ್ಷ ಪೂರ್ಣಗೊಂಡ ನಂತರ ಮಕ್ಕಳ ಪಾಲನಾ ಸಂಸ್ಥೆಯಿಂದ ಬಿಡುಗಡೆಗೊಂಡು ಸಮಾಜದ

17/11/20

Scanned with OKEN Scanner

ಮುಖ್ಯವಾಹಿನಿಯೊಂದಿಗೆ ಬೆರೆತು ಸಮಾಜಿಕ ಜೀವನ ನಡೆಸಲು, ಆರ್ಥಿಕವಾಗಿ ಸ್ವಾವಲಂಬಿಗಳಾಗಲು-ಹಾಗೂ ಮನೋಸ್ಥೈರ್ಯ ಹೊಂದಲು ಅನುವಾಗುವ ನಿಟ್ಟಿನಲ್ಲಿ ಮಕ್ಕಳಿಗೆ "ಬೆಳೆಯುವ ಸಿರಿ ಮೊಳಕೆಯಲ್ಲಿ" ಎಂಬ ನಾಣ್ಣುಡಿಯಂತೆ 14ನೇ ವಯಸ್ಸಿನಿಂದಲೇ ವೃತ್ತಿಪರ ಮಾರ್ಗದರ್ಶನ (Carrer Counselling) ನೀಡಲು ಕ್ರಮವಹಿಸುವುದು ಸೂಕ್ತವಾಗಿರುತ್ತದೆ. ಆದ್ದರಿಂದ, ಎಲ್ಲಾ ಮಕ್ಕಳ ಪಾಲನಾ ಸಂಸ್ಥೆಯಲ್ಲಿ ತ್ರೈಮಾಸಿಕಕ್ಕೊಮ್ಮೆ ವೃತ್ತಿಪರ ಸಮಾಲೋಚನಾ ತಜ್ಞರಿಂದ ಮಕ್ಕಳಿಗೆ ವೃತ್ತಿಪರ ಸಮಾಲೋಚನಾ ಅಧಿವೇಶನವನ್ನು ಏರ್ಪಡಿಸುವುದು.

ಮಕ್ಕಳು ಯಾವ ಕ್ಷೇತ್ರದಲ್ಲಿ ಅಥವಾ ವಿಷಯದಲ್ಲಿ ಆಸಕ್ತಿ ಹೊಂದಿದ್ದಾರೆ ಎಂಬುದನ್ನು ಮಕ್ಕಳೊಂದಿಗೆ ಸಮಾಲೋಚನೆ ನಡೆಸಿ ತಿಳಿದುಕೊಂಡು ಅಗತ್ಯವೆನಿಸಿದಲ್ಲಿ, ಸೂಕ್ತ ಸಲಹೆ ಹಾಗೂ ಮಾರ್ಗದರ್ಶನವನ್ನು ನೀಡಿ ಪ್ರೋತ್ಸಾಹಿಸುವುದು. ಭವಿಷ್ಯದಲ್ಲಿ ಉತ್ತಮ ಪ್ರಜೆಯಾಗಲು ಸಹಕರಿಸುವುದು. ಮಗುವಿನ ಅಗತ್ಯತೆ ಮತ್ತು ಉತ್ತಮ ಹಿತಾಸಕ್ತಿಗೆ ಅನುಗುಣವಾಗಿ ವೃತ್ತಿಪರ ಮಾರ್ಗದರ್ಶನವನ್ನು ನಿಯತಕಾಲಿಕವಾಗಿ ನೀಡುವುದು. ಮಕ್ಕಳ ಅಭಿರುಚಿ ಹಾಗೂ ಆಸಕ್ತಿ ಇರುವ ವಿಷಯಗಳು ಬದಲಾದಲ್ಲಿ ಆ ಬಗ್ಗೆಯೂ ಪರಿಶೀಲಿಸಿ, ಈ ಅಂಶವನ್ನು ಗಣನೆಗೆ ತೆಗೆದುಕೊಂಡು ಉತ್ತಮ ಸಮಾಲೋಚನೆ ಹಾಗೂ ಮಾರ್ಗದರ್ಶನವನ್ನು ಒದಗಿಸಿ ಸಮಾಜದಲ್ಲಿ ಸ್ವಾವಲಂಬಿ ಜೀವನ ಸಾಗಿಸಲು ಅನುವಾಗುವಂತಹ ವ್ಯವಸ್ಥೆಯನ್ನು ಕಲ್ಪಿಸುವುದು.

ಸರ್ಕಾರದಿಂದ ಸ್ಥಾಪಿಸಿರುವ ಹಾಗೂ ಬಾಲನ್ಯಾಯ ಮಕ್ಕಳ (ಪಾಲನೆ ಮತ್ತು ರಕ್ಷಣೆ)ಕಾಯ್ದೆ-2015ಯಡಿ ನೊಂದಾಯಿಸಿರುವ ಎಲ್ಲಾ ಮಕ್ಕಳ ಪಾಲನಾ ಸಂಸ್ಥೆಗಳಿಂದ, ಮಕ್ಕಳು 18 ವರ್ಷ ತುಂಬಿದ ಕಾರಣ ಬಿಡುಗಡೆಗೊಳ್ಳುತ್ತಿದ್ದು, ಅಂತಹ ಮಕ್ಕಳ ವಿದ್ಯಾಭ್ಯಾಸ ಪೂರ್ಣವಾಗದಿದ್ದಲ್ಲಿ, ವಿದ್ಯಾಭ್ಯಾಸ ಮುಂದುವರೆಸಲು ಅಥವಾ ಯಾವುದೇ ವೃತ್ತಿಪರ ಕೌಶಲ್ಯ ತರಬೇತಿ ಹೊಂದಲು ಅಥವಾ ಸ್ವಂತ ಉದ್ಯೋಗ ಪ್ರಾರಂಭಿಸಲು ಮತ್ತು ಸಮಾಜದ ಮುಖ್ಯ ವಾಹಿನಿಗೆ ಬರಲು ಹಾಗೂ ಒಟ್ಟಾರೆ ಆರ್ಥಿಕ ಸ್ವಾವಲಂಬಿಗಳಾಗುವವರೆಗೆ ಅಥವಾ ಗರಿಷ್ಠ 3 ವರ್ಷಗಳ ಅವಧಿಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ. ಆರ್ಥಿಕ ಸಹಾಯವನ್ನು ನೀಡುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

<u>ವ್ಯಾಪ್ತಿ:</u>

ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ, 2015ರ ಅಡಿ ನೊಂದಾಯಿತ ಎಲ್ಲಾ ಮಕ್ಕಳ ಪಾಲನಾ ಸಂಸ್ಥೆಗಳಿಂದ 18 ವರ್ಷ ಪೂರ್ಣಗೊಂಡು ಮಕ್ಕಳ ಕಲ್ಯಾಣ ಸಮಿತಿ/ಬಾಲನ್ಯಾಯ ಮಂಡಳಿ ಆದೇಶದನ್ವಯ ಬಿಡುಗಡೆಯಾಗುವ ಅರ್ಹ ಮಕ್ಕಳಿಗೆ; ಬಾಲನ್ಯಾಯ ಮಕ್ಕಳ (ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮಗಳು-2016ರ ನಿಯಮ 25 (2)ರನ್ವಯ 21 ವರ್ಷದವರೆಗೆ, ವಿಶೇಷ ಸಾಂದರ್ಭಿಕ ಸನ್ನಿವೇಶಗಳಲ್ಲಿ (exceptional circumstances) 21 ವರ್ಷ ಪೂರ್ಣಗೊಂಡ ನಂತರವೂ ಹೆಚ್ಚಿನ 2 ವರ್ಷಗಳ ಅವಧಿಗೆ (ಅಂದರೆ 23 ವರ್ಷಗಳವರೆಗೆ) ಮಕ್ಕಳು ಈ ಯೋಜನೆಯ ವ್ಯಾಪ್ತಿಗೆ ಒಳಪಡುತ್ತಾರೆ.

<u>ಯೋಜನೆಯ ಸೌಲಭ್ಯಗಳು:</u>

ಮಕ್ಕಳ ಪಾಲನಾ ಸಂಸ್ಥೆಗಳಿಂದ 18 ವರ್ಷ ತುಂಬಿದ ನಂತರ ಬಿಡುಗಡೆಯಾದ ಮಕ್ಕಳಿಗೆ ಜೀವನೋಪಾಯ ರೂಪಿಸಲು ಸಮಾಜದಲ್ಲಿ ಉತ್ತಮ ಜೀವನ ನಡೆಸಲು ಅನುವಾಗುವಂತೆ ಅವರ ಶಿಕ್ಷಣ ಮುಂದುವರಿಸಲು,

Scanned with CamScanner
Scanned with OKEN Scanner

ಕೌಶಲ್ಯ ಅಥವಾ ವೃತ್ತಿ ತರಬೇತಿ ಪಡೆಯಲು ಅಥವಾ ಸ್ವ-ಉದ್ಯೋಗ ಪ್ರಾರಂಭಿಸಲು ಮಾಸಿಕ ರೂ.5,000/-ಗಳ ಆರ್ಥಿಕ ಸಹಾಯವನ್ನು ಅವರು ಆರ್ಥಿಕ ಸ್ವಾವಲಂಬಿಗಳಾಗುವವರೆಗೆ ಅಥವಾ ಗರಿಷ್ಟ 3 ವರ್ಷಗಳವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಒದಗಿಸುವುದು.

**ಅರ್ಹತೆಯ ಮಾನದಂಡಗಳು:**

1. ಮಕ್ಕಳ ಕಲ್ಯಾಣ ಸಮಿತಿ/ಬಾಲನ್ಯಾಯ ಮಂಡಳಿಯ ಮೂಲಕ ಮಕ್ಕಳ ಪಾಲನಾ ಸಂಸ್ಥೆಗೆ ದಾಖಲಾಗಿರತಕ್ಕದ್ದು.
2. ಮಕ್ಕಳ ಪಾಲನಾ ಸಂಸ್ಥೆಯಿಂದ ಮಕ್ಕಳ ಕಲ್ಯಾಣ ಸಮಿತಿ/ಬಾಲನ್ಯಾಯ ಮಂಡಳಿಯ ಬಿಡುಗಡೆ ಆದೇಶದ ಮೂಲಕ ಮಾತ್ರ ಬಿಡುಗಡೆಗೊಂಡಿರತಕ್ಕದ್ದು.
3. ಮಕ್ಕಳ ಕಲ್ಯಾಣ ಸಮಿತಿಯ ಆದೇಶದ ಮೇರೆಗೆ ಸರ್ಕಾರಿ ಮಕ್ಕಳ ಪಾಲನಾ ಸಂಸ್ಥೆಯಿಂದ ಬಿಡುಗಡೆಯಾಗುವ 18 ವರ್ಷ ತುಂಬಿದ ಅನಾಥ ಮಕ್ಕಳಿಗೆ ಪ್ರಥಮ ಆದ್ಯತೆ ನೀಡುವುದು. ದೀರ್ಘಾವಧಿ ಪುನರ್ವಸತಿಗೆ ಮಕ್ಕಳು ಪಾಲನಾ ಸಂಸ್ಥೆಗೆ ದಾಖಲಾದಾಗಿನಿಂದ ಆ ಮಗುವಿನ ಅವಿಭಕ್ತ/ವಿಸ್ತೃತ ಕುಟುಂಬದವರು ಮಗುವನ್ನು ಭೇಟಿ ಮಾಡದಿದ್ದಲ್ಲಿ, ರಜಾ ಅವಧಿಯಲ್ಲಿ ಸಂಸ್ಥೆಯಿಂದ ಮನೆಗೆ ಕರೆದೊಯ್ಯದಿದ್ದಲ್ಲಿ ಅಂತಹ ಅನಾಥ/ಏಕ ಪೋಷಕರನ್ನು ಹೊಂದಿರುವ ಮಕ್ಕಳು 18 ವರ್ಷ ತುಂಬಿದ ನಂತರ ಯಾರ ಆಶ್ರಯವೂ ಇಲ್ಲದೇ ಸ್ವತಂತ್ರ ಜೀವನ ನಡೆಸಬೇಕಾದಲ್ಲಿ, ವಿದ್ಯಾಭ್ಯಾಸ ಮುಂದುವರೆಸಲು ಬಯಸಿದಲ್ಲಿ ಹಾಗೂ ವೃತ್ತಿಪರ ಶಿಕ್ಷಣ ಪಡೆಯಲು ಆದ್ಯತೆಯ ಮೇರೆಗೆ ಈ ಯೋಜನೆಯ ಪ್ರಯೋಜನ ಪಡೆಯಲು ಅರ್ಹರಿರುತ್ತಾರೆ.
4. ಮಗು ಪಾಲನೆ ಮತ್ತು ರಕ್ಷಣೆಗಾಗಿ ಬಂದ ಮಗುವಾದಲ್ಲಿ ಕನಿಷ್ಠ ಪಕ್ಷ 3 ವರ್ಷದವರೆಗೆ ಮಕ್ಕಳ ಪಾಲನಾ ಸಂಸ್ಥೆಯ ಆಶ್ರಯದಲ್ಲಿರತಕ್ಕದ್ದು. ಕೆಲವೊಂದು ವಿಶೇಷ ಪ್ರಕರಣಗಳಲ್ಲಿ, ಪಾಲನಾ ಸಂಸ್ಥೆಯಲ್ಲಿ ಕನಿಷ್ಠ ಒಂದು ವರ್ಷದ ಅವಧಿಗೆ ದಾಖಲಾದ ಮಕ್ಕಳನ್ನು ಸಹ "ಪ್ರಾಯೋಜಕತ್ವ ಮತ್ತು ಪೋಷಕತ್ವ ಅನುಮೋದನಾ ಸಮಿತಿ"ಯು ಗುರುತಿಸಿ, ಶಿಫಾರಸ್ಸಿನೊಂದಿಗೆ ಪ್ರಸ್ತಾವನೆ ಸಲ್ಲಿಸಿ ಜಿಲ್ಲಾಧಿಕಾರಿಗಳಿಂದ ಅನುಮೋದನೆ ಪಡೆದುಕೊಂಡು ಅಂತಹ ಮಕ್ಕಳಿಗೆ ಸಹಾ ಉಪಕಾರ ಯೋಜನೆಯ ಪ್ರಯೋಜನವನ್ನು ತಲುಪಿಸಬಹುದು.
5. ಆರ್ಥಿಕ ಬೆಂಬಲಕ್ಕಾಗಿ ಮಕ್ಕಳ ಪಾಲನಾ ಸಂಸ್ಥೆಯ ಮುಖ್ಯಸ್ಥರು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸುವುದು.

**ಸಲ್ಲಿಸಬೇಕಾದ ದಾಖಲಾತಿಗಳು:**

- ಶಿಕ್ಷಣ ಮುಂದುವರಿಸಿದ್ದಲ್ಲಿ, ಶಿಕ್ಷಣ ಸಂಸ್ಥೆಯಿಂದ ದಾಖಲಾಗಿರುವ ಬಗ್ಗೆ ದಾಖಲಾತಿ ಪ್ರಮಾಣ ಪತ್ರ ಹಾಗೂ ಕ್ರಮಬದ್ಧವಾಗಿ ಹಾಜರಾದ ಬಗ್ಗೆ ಪ್ರತಿ ಮಾಹೆ ಹಾಜರಾತಿ ಪ್ರಮಾಣ ಪತ್ರ ಸಲ್ಲಿಸುವುದು ಹಾಗೂ ಪ್ರತಿ ವರ್ಷ ಪ್ರಗತಿ ಮಾಹಿತಿ ಸಲ್ಲಿಸುವುದು. ಒಂದು ವೇಳೆ ಕಾರಣಾಂತರಗಳಿಂದ ಶಿಕ್ಷಣದ ಮುಖ್ಯ ವಾಹಿನಿಯಿಂದ ಹೊರಬಂದು ವೃತ್ತಿ/ಕೌಶಲ್ಯ ತರಬೇತಿಗೆ ದಾಖಲಾಗಿದ್ದಾಗ್ಯೂ ಅಂತಹ ಮಕ್ಕಳಿಗೆ ಸಹಾ ಉಪಕಾರ ಯೋಜನೆಯ ಆರ್ಥಿಕ ಸೌಲಭ್ಯ ಮುಂದುವರೆಸುವುದು.

17/1/20

Scanned with CamScanner
Scanned with OKEN Scanner

- ವೃತ್ತಿ/ಕೌಶಲ್ಯ ತರಬೇತಿಗೆ ದಾಖಲಾದಲ್ಲಿ, ಸಂಬಂಧಪಟ್ಟ ಸಂಸ್ಥೆಗಳಿಂದ ದಾಖಲಾತಿ ಮಾಹೆಯಾನ ಹಾಜರಾತಿ ಪ್ರಮಾಣ ಪತ್ರ ಒದಗಿಸುವುದು.
- ಜೀವನೋಪಾಯಕ್ಕಾಗಿ ಸ್ವ-ಉದ್ಯೋಗ ಪ್ರಾರಂಭಿಸುವ ಮುನ್ನ ಸಂಬಂಧಿಸಿದ ಇಲಾಖೆಯಿಂದ ಇರುವ ಸೌಲಭ್ಯಗಳು ಹಾಗೂ ಅನುಷ್ಠಾನದ ಕುರಿತು ಸದರಿ ಇಲಾಖೆ ಅವರ ಅಭಿಪ್ರಾಯಗಳನ್ನೊಳಗೊಂಡ ಯೋಜನಾ ವರದಿಯನ್ನು ಅರ್ಹ ಫಲಾನುಭವಿಯಿಂದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಪಡೆದು, ಪರಿಶೀಲಿಸುವುದು. ಈ ಯೋಜನಾ ವರದಿಯು ಪ್ರಾಯೋಗಿಕವಾಗಿ ಕಾರ್ಯಸಾಧ್ಯವಾಗಿರುವುದರ ಬಗ್ಗೆ (practically feasible and viable) ಮತ್ತು ಸ್ವಾವಲಂಬಿ ಬದುಕು ರೂಪಿಸಿಕೊಳ್ಳಲು ಕಾರ್ಯಸಿದ್ಧತೆಯಿರುವ ಬಗ್ಗೆ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ದೃಢಿಕರಣ ಪತ್ರ ಪಡೆದು ನಂತರ ಸದರಿ ಫಲಾನುಭವಿಗೆ ಉಪಕಾರ ಯೋಜನೆಯ ಅರ್ಹ ಫಲಾನುಭವಿ ಎಂದು ಜಿಲ್ಲಾಧಿಕಾರಿಗಳಿಂದ ಮಂಜೂರಾತಿ ಪಡೆಯತಕ್ಕದ್ದು.
- ಜಿಲ್ಲಾ ಮಕ್ಕಳ ರಕ್ಷಣಾ ಘಟಕದಿಂದ ನಿಯೋಜಿತ ಸಿಬ್ಬಂದಿಗಳು ಫಲಾನುಭವಿಗಳ ಅನುಪಾಲನೆ ಮಾಡಿ ಅವರಲ್ಲಿ ಕ್ರಮಬದ್ಧತೆಯಿದ್ದಲ್ಲಿ, ಆರ್ಥಿಕ ಸಹಾಯ ಮುಂದುವರೆಸಲು ಅಥವಾ ನಿರೀಕ್ಷಿತ ಕ್ರಮಬದ್ಧತೆ/ಪ್ರಗತಿ ಇಲ್ಲದಿದ್ದಲ್ಲಿ ಉಪಕಾರ ಯೋಜನೆಯ ಆರ್ಥಿಕ ನೆರವನ್ನು ಸ್ಥಗಿತಗೊಳಿಸಲು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಿಗೆ ಪ್ರತೀ ತ್ರೈಮಾಸಿಕ ಅವಧಿಗೊಮ್ಮೆ ತ್ರೈಮಾಸಿಕ ಅನುಸರಣಾ ವರದಿ(Quarterly Follow-up Report)ಯನ್ನು ಕಡ್ಡಾಯವಾಗಿ ವರದಿ ಮಾಡುವುದು. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಈ ಶಿಫಾರಸ್ಸನ್ನು "ಪ್ರಾಯೋಜಕತ್ವ ಮತ್ತು ಪೋಷಕತ್ವ ಅನುಮೋದನಾ ಸಮಿತಿ"ಗೆ ಸಲ್ಲಿಸುವುದು. ಸದರಿ ತ್ರೈಮಾಸಿಕ ಅನುಸರಣಾ ವರದಿಯ ಆಧಾರದ ಮೇಲೆಯೇ ಪ್ರಾಯೋಜಕತ್ವ ಮತ್ತು ಪೋಷಕತ್ವ ಅನುಮೋದನಾ ಸಮಿತಿಯು ಉಪಕಾರ ಯೋಜನೆಯ ಸೌಲಭ್ಯವನ್ನು ಆಯಾ ಫಲಾನುಭವಿಗಳಿಗೆ ಮುಂದುವರೆಸಲು ಅಥವಾ ನಿಲ್ಲಿಸಲು ಕ್ರಮಕೈಗೊಳ್ಳುವುದು.

<u>ಯೋಜನೆಯ ಆರ್ಥಿಕ ಸಹಾಯದ ಬಿಡುಗಡೆಯ ವಿವರ:</u>

- ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಯವರು ಪ್ರಾಯೊಜಕತ್ವ ಯೋಜನೆಯ ಸಮಿತಿಯ ಶಿಫಾರಸ್ಸಿನ ಮೇರೆಗೆ ಫಲಾನುಭವಿಗಳ ಪಟ್ಟಿಯನ್ನು ಸಿದ್ಧಪಡಿಸಿ, ಸದರಿ ಫಲಾನುಭವಿಗಳ ಪಟ್ಟಿಗೆ ಆಡಳಿತ ಹಾಗೂ ಆರ್ಥಿಕ ಅನುಮೋದನೆಯನ್ನು ಜಿಲ್ಲಾಧಿಕಾರಿಯವರಿಂದ ಪಡೆಯುವುದು.
- ಆರ್ಥಿಕ ಸಹಾಯವನ್ನು ಫಲಾನುಭವಿಯ ಆಧಾರ ಲಿಂಕನ್ನು ಹೊಂದಿದ ಬ್ಯಾಂಕ್ ಖಾತೆಗೆ ಆರ್.ಟಿ.ಜಿ.ಎಸ್. ಮೂಲಕ ಪ್ರತಿ ಮಾಸಿಕ ಪಾವತಿಸತಕ್ಕದ್ದು.
- ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಸಿಬ್ಬಂದಿ ತ್ರೈಮಾಸಿಕಕ್ಕೊಮ್ಮೆ ಫಲಾನುಭವಿಗಳ ಅನುಸರಣೆ ಮಾಡಿ ವರದಿಯನ್ನು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಿಗೆ ನೀಡತಕ್ಕದ್ದು. ಸದರಿ ತ್ರೈಮಾಸಿಕ ಅನುಸರಣಾ ವರದಿಯ ಆಧಾರದ ಮೇಲೆ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಜಿಲ್ಲಾಧಿಕಾರಿಗಳ ಅನುಮತಿ ಪಡೆದು ಅನುದಾನವನ್ನು ಫಲಾನುಭವಿ ಆಧಾರ್ ಲಿಂಕ್ ಆಗಿರುವ ಬ್ಯಾಂಕ್ ಖಾತೆಗೆ ಆರ್.ಟಿ.ಜಿ.ಎಸ್. ಮೂಲಕ ಜಮಾ ಮಾಡತಕ್ಕದ್ದು.

Scanned with OKEN Scanner

ಯೋಜನೆಯ ಪ್ರಯೋಜನ ಸ್ಥಗಿತಗೊಳ್ಳುವುದು:

1. ಮಂಜೂರಾತಿ ಆದೇಶ ಹೊರಡಿಸಿದ 3 ವರ್ಷದ ಅವಧಿ ಪೂರ್ಣಗೊಂಡಾಗ
2. ಮೂರು ವರ್ಷದ ಒಳಗೆ ಯಾವುದೇ ಸಂದರ್ಭದಲ್ಲಿ ಫಲಾನುಭವಿ ಆರ್ಥಿಕವಾಗಿ ಸ್ವಾವಲಂಬಿ ಆಗಿರುವುದು ಕಂಡು ಬಂದಲ್ಲಿ
3. ಫಲಾನುಭವಿಯು ಆರ್ಥಿಕ ಸಹಾಯ ನಿರಾಕರಿಸಿ. ಮನವಿ ಸಲ್ಲಿಸಿದ್ದಲ್ಲಿ
4. ರಾಜ್ಯದಿಂದ ಹೊರಗೆ ಸ್ಥಳಾಂತರಗೊಂಡಲ್ಲಿ
5. ಮರಣ ಹೊಂದಿದಲ್ಲಿ

17/11/20

(ವಿ.ಭಾಗ್ಯಲಕ್ಷ್ಮಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ(ಡಿ ಶಾಖೆ).

(ವಿ. ಭಾಗ್ಯಲಕ್ಷ್ಮಿ)
ಸರ್ಕಾರದ ಅಧೀನ ಕಾರ್ಯದರ್ಶಿ-3
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ

Scanned with OKEN Scanner